ರಾಜ್ಯದ ರೇಷ್ಮೆ ಫೆಡರೇಷನ್‌ನ್ನು ಮುಚ್ಚಿರುವುದು

೮೨ ಶ್ರೀ ಮುಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಕರ್ನಾಟಕ ರಾಜ್ಯದ ರೇಷ್ಮೆ ಫೆಡರೇಷನ್‌ನ್ನು ಮುಚ್ಚಿಬಿಡುವ ವಿಚಾರ ಸರಕಾರದವರಲ್ಲಿ ದೆಯೆ ;

(ಆ) ಹಾಗೇನಾದರೂ ಇದ್ದಲ್ಲಿ, ಇದಕ್ಕೆ ಕಾರಣಗಳೇನು ?

x x x x

ಕನಿಷ್ಠ ವೇತನ

೮೩ ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ನ್ಯಾಯಾಧೀಶ ಶ್ರೀ ಬೋಪಣ್ಣನವರು ಕನಿಷ್ಠ ವೇತನ ನಿಗದಿಗೊಳಿಸಿದ ಬಗ್ಗೆ ನೀಡಿದ ತೀರ್ಪು ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರವು ಮೇಲ್ಕಂಡ ಕಾರ್ಮಿಕರಿಗೆ ನ್ಯಾಯ ದೊರಕಿಸುವಲ್ಲಿ ಸೂಕ್ತ ಕ್ರಮ ತೆಗೆದು ಕೊಳ್ಳಲು ಯೋಚಿಸಿದೆಯೇ ?

(ಇ) ಹಾಗಿದ್ದರೆ, ಅವುಗಳ ಬಗ್ಗೆ ವಿವರಣೆ ನೀಡಿ.

ಶ್ರೀ ಅಜೀಜ್ ಸೇಠ್ (ಕಾರ್ಮಿಕ ಮಂತ್ರಿಗಳು).—

(ಅ) ಹೌದು

(ಆ) ಹೌದು

(ಇ) ಸರ್ಕಾರವು ಈ ವಿಶೆಯಲ್ಲಿ ಸಿಂಗಲ್ ಬೆಂಚ್ ಜಡ್ಜ್‌ರವರು ನೀಡಿದ ತೀರ್ಪಿನ ವಿರುದ್ಧ ರಾಜ್ಯದ ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್‌ನ ಮುಂದೆ ಅಪೀಲು ದಾಖಲು ಮಾಡಿದೆ. ಸದ್ಯದಲ್ಲಿ ಈ ವಿಷಯವು ನ್ಯಾಯಾಲಯದ ಡಿವಿಜನ್ ಬೆಂಚಿನ ಪರಿಶೀಲನೆಯಲ್ಲಿದೆ.

ಹೊಸದಾಗಿ ಕನಿಷ್ಠ ವೇತನ ಮಂಡಳಿಯನ್ನು ರಚಿಸುವ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ವ್ಯವಸಾಯ ಕಾರ್ಮಿಕರ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಲಕ್ಷ್ಮಾಂತರ ವ್ಯವಸಾಯ ಕಾರ್ಮಿಕರ ಜೀವನ ಪರಿಸ್ಥಿತಿಯು ಸರಿಯಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ವ್ಯವಸಾಯ ಕಾರ್ಮಿಕರಿಗೆ ಕಾಯಿದೆಯ ಸಾಧನೆಗಳನ್ನು ಆಳವಡಿಸಲು ಪದೇ ಪದೇ ಒತ್ತಾಯ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಶೋಷಣೆಗೆ ಒಳಗಾಗಿರುವ ಈ ಮೇಲ್ಕಂಡ ವ್ಯವಸಾಯ ಕಾರ್ಮಿಕರ ಸ್ಥಿತಿಯನ್ನು ಉತ್ತಮ ಪಡಿಸಲು ಸರ್ಕಾರ ಏನಾದರೂ ಸೂಕ್ತ ಕ್ರಮ ತೆಗೆದುಕೊಂಡಿದೆಯೇ ?

---

*Reply not received